3. ಹನಿ ನೀರಾವರಿ

4. ಬೇಸಾಯ ಸಂಬಂಧಿತ ಚಟುವಟಿಕೆಗಳು

5. ಕೃಷಿ ಜಾತ್ರೆ ಮತ್ತು ವಸ್ತು ಪ್ರದರ್ಶನ

6. ಕೃಷಿ ಕಛೇರಿ ಕಟ್ಟಡ ನಿರ್ಮಾಣ

7. ಇತರೆ ಕೃಷಿ ಯೋಜನೆ

8. ಸಾವಯವ ಗೊಬ್ಬರ

9. ಸಮೀಕ್ಷಾ ಸಾಧನಾ ಸಾಮಗ್ರಿ

ಬೀದರ್ ಜಿಲ್ಲೆಯಲ್ಲಿ ರಸ್ತೆ ಅಭಿವೃದ್ಧಿ ಯೋಜನೆಗಳು

944 (1788); ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ)

(ಅ) ಬೀದರ್ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳ ಅವಧಿಯಲ್ಲಿ ಕೇಂದ್ರ ಸರ್ಕಾರದ ರಸ್ತೆ ನಿಧಿ ಯೋಜನೆಯಡಿಯಲ್ಲಿ ಹಾಗೂ ಇತರೆ ಕೇಂದ್ರ ಸರ್ಕಾರದ ಯೋಜನೆಗಳ ಅಡಿಯಲ್ಲಿ ಯಾವ ಯಾವ ಮತ್ತು ಎಷ್ಟೆಷ್ಟು ಕಿಮೀ. ರಸ್ತೆ ಅಭಿವೃದ್ಧಿ ಮತ್ತು ನಿರ್ಮಾಣ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ;

(ಆ) ಇದಕ್ಕಾಗಿ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ವೆಚ್ಚ ಮಾಡಲಾದ ಹಣವೆಷ್ಟು; ಇದೇ ಅವಧಿಯಲ್ಲಿ ಪ್ರತಿ ವರ್ಷ ರಾಜ್ಯ ಸರ್ಕಾರ ನೀಡಿರುವ ಹಣ ವೆಷ್ಟು;

(ಇ) ಜಿಲ್ಲೆಯಲ್ಲಿ ಅಂತರ ರಾಜ್ಯ ಸಂಪರ್ಕ ರಸ್ತೆಗಳ ಅಭಿವೃದ್ಧಿಗೆ ಪ್ರಸಕ್ತ ಸಾಲಿನಲ್ಲಿ ಯಾವ ಯೋಜನೆಗಳನ್ನು ರೂಪಿಸಲಾಗಿದೆ; ಇದಕ್ಕಾಗಿ ಎಷ್ಟು ಹಣವನ್ನು ವೆಚ್ಚ ಮಾಡಲು ಉದ್ದೇಶಿಸಿದೆ?

ಡಾ: ಹೆಚ್. ಸಿ. ಮಹದೇವಪ್ಪ (ಮಾನ್ಯ ಲೋಕೋಪಯೋಗಿ ಸಚಿವರು)

(ಅ) ವಿವರಗಳನ್ನು ಅನುಬಂಧ–2 ರಲ್ಲಿ ನೀಡಲಾಗಿದೆ.

(ಆ) ಬೀದರ್ ಜಿಲ್ಲೆಗೆ ಸಂಬಂಧಿಸಿದಂತೆ ವಿಧಾನ ಸಭಾ ಕ್ಷೇತ್ರಾವಾರು ವೆಚ್ಚದ ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.

(ಇ) ಪ್ರಸಕ್ತ ಸಾಲಿನಲ್ಲಿ ಬೀದರ್ ಜಿಲ್ಲೆಯಲ್ಲಿ ಅಂತರ್ ರಾಜ್ಯ ಸಂಪರ್ಕ ರಸ್ತೆ ಅಭಿವೃದ್ಧಿಯಡಿ ಯಾವ ಕಾಮಗಾರಿಗಳು ಮಂಜೂರಾಗಿರುವುದಿಲ್ಲ.

ಅನುಬಂಧ–1

ಕಳೆದ ಮೂರು ವರ್ಷಗಳಲ್ಲಿ ಅಂದರೆ 2010–11, 2011–12 ಮತ್ತು 2012–13 ಕೇಂದ್ರ ನಿಧಿಯೋಜನೆ ಹಾಗೂ ಇತರೆ ಕೇಂದ್ರ ಸರ್ಕಾರದ ಯೋಜನೆಯಡಿ ಮಂಜೂರಾದ ಅಭಿವೃದ್ಧಿ ಮತ್ತು ನಿರ್ಮಾಣ ವಿವರಗಳು ಕೆಳಕಂಡಂತೆ ಇದೆ.

ಕ್ರ. ಸಂ.	ಕಾಮಗಾರಿ ಹೆಸರು	ಕಾಮಗಾರಿಯಡಿ ಅಭಿವೃದ್ಧಿಪಡಿಸಿದ ರಸ್ತೆ ಉದ್ದ ಕಿಮೀ. ಗಳಲ್ಲಿ	ಮಂಜೂರಾದ ವೆಚ್ಚ ಲಕ್ಷಗಳಲ್ಲಿ.	ಯೋಜನೆ ಹೆಸರು	ವಿಧಾನಸಭಾ ಕ್ಷೇತ್ರ
1	ಹುಮ್ನಾಬಾದ್–ಬಾಲ್ಕಿ ರಸ್ತೆ ಅಂದರೆ ಹುಮ್ನಾಬಾದ್ ಇಂದ ಡದಗಿ ಕ್ರಾಸ್‌ವರೆಗಿನ ಅಭಿವೃದ್ಧಿ	18.00	150.00	ಸಿಆರ್‌ಎಫ್	ಹುಮ್ನಾಬಾದ್
2	ಕೆರಕನಹಳ್ಳಿ ಇಂದ ಆಂದ್ರ ಗಡಿಯವರೆಗೆ ಕಿ.ಮೀ. 4.00 ಇಂದ 14.40 ವರೆಗೆ ಭಿಮಲ್‌ಬೇಡ ಕರಕನಹಳ್ಳಿ ರಸ್ತೆ ಅಭಿವೃದ್ಧಿ (ಆಯ್ದ ಭಾಗಗಳು)	4.5	50.00	ಸಿಆರ್‌ಎಫ್	ಬೀದರ್
3	ವನಮಾರಪಳ್ಳಿಯಿಂದ–ರಾಯಚೂರು ರಸ್ತೆ ಕಿ.ಮೀ. 61.00 ಇಂದ 80.60ರವರೆಗೆ ಅಂದರೆ ಕೊಡವ ಸೇತುವೆಯಿಂದ ಗಡಿಯವರೆಗೆ ಅಭಿವೃದ್ಧಿ	3.20	50.00	ಸಿಆರ್‌ಎಫ್	ಹುಮ್ನಾಬಾದ್

4	ಬೀದರ್‌ನಿಂದ ಚನಂಬಲ್ ರಸ್ತೆ ಅಭಿವೃದ್ಧಿ ಕಿ.ಮೀ. 0.00 ಯಿಂದ 10.00 ವರೆಗೆ	7.00	100.00	ಸಿಆರ್‌ಎಫ್	ಬೀದರ್
5	ಉಲ್ಲಾಳ್ ನಿಂದ ಹಳ್ಳಿಬೇಡ ರಸ್ತೆ ಕಿಮೀ. 5.00 ರಿಂದ 23.00 ವರೆಗೆ ಅಭಿವೃದ್ಧಿ (ಆಯ್ದ ಭಾಗಗಳು)	4.50	100.00	ಸಿಆರ್‌ಎಫ್	ಹುಮ್ನಾಬಾದ್
6	ಮುರ್ಖಿ (ಮಹಾರಾಷ್ಟ್ರ ಗಡಿ) ಯಿಂದ ಮಲೆಗಾಂವ್ ವರೆಗೆ ಅಭಿವೃದ್ಧಿ	3.50	45.00	ಸಿಆರ್‌ಎಫ್	ಔರಾದ್
7	ಜಹೀರಾಬಾದ್ ಗಾಂದೇಡ್ ರಸ್ತೆ ಕಿ.ಮೀ. 43.00 ಇಂದ 69.2000 ವರೆಗೆ ಅಭಿವೃದ್ಧಿ	11.60	400.00	ಸಿಆರ್‌ಎಫ್	ಹುಮ್ನಾಬಾದ್
8	ಜಹೀರಾಬಾದ್ ಗಾಂದೇಡ್ ರಸ್ತೆ ಕಿ.ಮೀ.30.00 ಇಂದ 30.60 ವರೆಗೆ ಅಭಿವೃದ್ಧಿ	6.60	365.0	ಸಿಆರ್‌ಎಫ್	ಹುಮ್ನಾಬಾದ್
9	ರಾಹೆ–218–ಜ್ಞ ರಲ್ಲಿ ಕಿಮೀ. 410.00 ರಿಂದ 420.46 ವರೆಗೆ ನವೀಕರಣ ಕಾಮಗಾರಿ	10.40	373.26	ಪಿಆರ್ (ಕೇಂದ್ರ ಸರ್ಕಾರದ ಯೋಜನೆ)	ಹುಮ್ನಾಬಾದ್

ಅನುಬಂಧ–2

ಕಳೆದ ಮೂರು ವರ್ಷಗಳಲ್ಲಿ ರಾಜ್ಯ ಸರ್ಕಾರ ರಾಜ್ಯಕ್ಕೆ ವಿವಿಧ ಯೋಜನೆಯಡಿ ನೀಡಿದ ಅನುದಾನದ ವಿವರ ಈ ಕೆಳಕಂಡಂತಿದೆ:

ಕ್ರ.ಸಂ.	ಯೋಜನೆ	ಅನುದಾನ ರೂ. ಲಕ್ಷಗಳಲ್ಲಿ			ಷರಾ
		2010–11	2011–12	2012–13	
1	ಸಿ. ಆರ್. ಎಫ್.	5000.00	8300.00	12000.00	
2	ಅಂತರ್ ರಾಜ್ಯ	650.00	2900.00	1000.00	
3	ಆರ್ಥಿಕ ಪ್ರಾಮುಖ್ಯತೆ	1200.00	1600.00	1000.00	

ನಿಗದಿತ ಅವಧಿಯಲ್ಲಿ ಕಾಮಗಾರಿ ಅನುಷ್ಠಾನದಲ್ಲಿ ವಿಳಂಬ

945 (1789); ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ)

(ಅ) ಕಳೆದ ಮೂರು ವರ್ಷಗಳ ಅವಧಿಯಲ್ಲಿ ಬೀದರ್ ಲೋಕೋಪಯೋಗಿ ವಿಭಾಗದಲ್ಲಿ ಯಾವ ಯಾವ ಗುತ್ತಿಗೆದಾರರು ವಹಿಸಿಕೊಂಡಿದ್ದ ಕಾಮಗಾರಿಗಳನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಿರುತ್ತಾರೆ; ಮತ್ತು ಯಾವ ಯಾವ ಗುತ್ತಿಗೆದಾರರು ನಿಗದಿತ ಅವಧಿ ನಂತರ ಕಾಮಗಾರಿ ಗಳನ್ನು ಅಪೂರ್ಣಗೊಳಿಸಿದ್ದಾರೆ; (ಇವರುಗಳ ಹೆಸರು, ಇವರ ಸಂಸ್ಥೆಯ ಹೆಸರು, ವಿವರಗಳ ಮಾಹಿತಿಯನ್ನು ಒದಗಿಸುವುದು)

(ಆ) ನಿಗದಿತ ಅವಧಿಯ ನಂತರವೂ ಕಾಮಗಾರಿಗಳನ್ನು ಪೂರ್ಣಗೊಳಿಸು ವುದಕ್ಕೆ ವಿಳಂಬ ಧೋರಣೆಯನ್ನು ಅನುಸರಿಸಿದಕ್ಕಾಗಿ ಯಾವ ಯಾವ ಗುತ್ತಿಗೆದಾರರನ್ನು ಸ್ವಂತ ವೆಚ್ಚದ ಮೇಲೆ ರಿಸ್ಕ್ ಅಂಡ್ ಕಾಸ್ಟ್ ಆಧಾರದ ಮೇಲೆ ರೀಸೆಂಟ್ ಮಾಡಲಾಗಿದೆ;

(ಇ) ಈ ಗುತ್ತಿಗೆದಾರರುಗಳ ಹೆಸರು, ವಿಳಾಸ ಮತ್ತು ವಿಳಂಬ ಮಾಡಿದ ಕಾಮಗಾರಿಗಳ ಪೂರ್ಣ ಮಾಹಿತಿಯ ವಿವರ ನೀಡುವುದು;